**ದಿಃ06.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3ನೇ ಎದುರುದಾರರ ಪರ ಶ್ರೀ.ಕೆ.ಡಿ.ಡಿ ವಕೀಲರಿಂದ ಃ**

ಅಪಘಾತ ಸ್ಥಳ ನನ್ನ ಮನೆಯಿಂದ ಸುಮಾರು 250ಮಿ ದೂರ ಇದೆ. ಬೈಕು ಕುಶಾಲನಗರದಿಂದ ಪಿರಿಯಾ ಪಟ್ಟಣ ದ ಕಡೆ ಹೋಗುತ್ತಿತ್ತು. ಅಪಘಾತ ಸ್ಥಳ ಜನ ನಿಲ್ಲುವಂತ ಸ್ಥಳ ಅಲ್ಲ. ಸದರಿ ಸ್ಥಳ ಜಂಕ್ಷಣ ಅಲ್ಲ ಮತ್ತು ವಾಹನ ನಿಲ್ಲುವಂತ ಸ್ಥಳ ಅಲ್ಲ. ಲಾರಿಯ ಮುಂದಿನ ಬಲ ತುದಿ ಬೈಕಿಗೆ ಡಿಕ್ಕಿ ಹೊಡೆಸಿತು. ಅಪಘಾತ ಕಾಲಕ್ಕೆ ಬೈಕ್ ಚಾಲಕ ಟಾರ್ ರಸ್ತೆಯ ಮೇಲೆ ವಾಹನವನ್ನು ಚಾಲನೆ ಮಾಡುತ್ತಿದ್ದರು. ಸಾಕ್ಷಿ ಮುಂದುವರೆದು ಟ್ರಕ್ ಡಿಕ್ಕಿ ಹೊಡೆಸಿದ್ದರಿಂದ ರಸ್ತೆ ಯ ಮಧ್ಯಭಾಗಲ್ಲಿ ಇರುವ ಬಿಳಿ ಪಟ್ಟಿಯ ಬಳಿ ಬಿದ್ದ ಎನುನತ್ತಾರೆ. ಅಪಘಾತ ಸ್ಥಳದಲ್ಲಿ ನನ್ನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಅಪಘಾತ ಸಂಬಂಧ ಯಾರು ದೂರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಅಪಘಾತ ಸಂಬಂಧ ದೂರು ಕೊಟ್ಟಿಲ್ಲ. ಅಪಘಾತ ಸಂಬಂಧ ಪೊಲೀಸರಿಗೆ ನಾನು ಫೋನ್ ಮಾಡಿಲ್ಲ. ಅಪಘಾತ ಸಂಬಂಧ ನಾನು ಆ್ಯಂಬುಲೆನ್ಸ್ ಗೆ ಫೋನ್ ಕರೆ ಮಾಡಿಲ್ಲ. ನಾನು ಮೃತನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿಲ್ಲ. ಅಪಘಾತ ಸಂಬಂಧ ದಾಖಲಾದ ಕ್ರಿಮಿನಲ್ ಪ್ರಕರಣದಲ್ಲಿ ನನ್ನು ಸಾಕ್ಷಿದಾರನನ್ನಾಗಿ ಮಾಡಿರುತ್ತಾರೆ. ಮೃತನ ಹೆಸರನ್ನು ನಾನು ತಿಳಿದುಕೊಂಡಿಲ್ಲ. ಆತನ ಮನೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಾನು

ಅಪಘಾತವನ್ನು ಖುದುದ ನೋಡಿಲ್ಲ  ಮೃತನ ಮನೆಯವರಿಗೆ ಸಹಾಯ ಮಾಡಬೇಕೆಂಕು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಹೇಳಿದ ಹಾಗೆ ಲಾರಿ ಚಾಲಕನಿಂದ ಈ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಮೃತನೇ ಅತೀವೇಗ ಮತ್ತು ಅಜಾಗರೂಕತೆಯಿಂದ ತನ್ನ ಬೈಕನ್ನು ಚಾಲನೆ ಮಾಡಿ ಬಿದ್ದು ಪೆಟ್ಟು ಮಾಡಿಕೊಂಡು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಮೃತ ಹೆಲ್ಮೆಟ್ ಧರಿಸಿದ್ದ. ಸಾಕ್ಷಿ ಮುಂದುವರೆದು ಹೆಲ್ಮೆಟ್ ಅಲ್ಲೆ ಬಿದಿತ್ತು ಎನ್ನುತ್ತಾರೆ. ಅಪಘಾತ ಕಾಲಕ್ಕೆ ಮೃತ ಹೆಲ್ಮೆಟ್ ಧರಿಸಿರಲಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.